

ಮಂಕಿಟೋಪಿ, ಹಾವಿನಂತಹ ಮಫ್ಲರ್ ಕೊಳ್ಳುವ ಉತ್ಸಾಹದಲ್ಲಿದ್ದರು. ಬಗೆಬಗೆಯ ತಿಂಡಿಗಳ ಜೋಡಿಸಿಕೊಳ್ಳುತ್ತಿದ್ದರು. ನಾನು ಮಾತ್ರ ಶೆಲ್ಲು, ರೀಲುಗಳ ಗೋಜಲಿಗೆ ಬಿದ್ದಿದ್ದೆ. ಜೊತೆಗೆ ಕ್ಯಾಮೆರಾ ಜೋಪಾನ ಮಾಡುವ ಸರಿಯಾದ ಗಟ್ಟಿ ಬ್ಯಾಗಿನ ಹುಡುಕಾಟದಲ್ಲಿದ್ದೆ.

ಕೈಯಲ್ಲಿ ನೆಟ್ಟಗೆ ಕಾಸಿಲ್ಲ, ಆದರೂ ಒಣ ಶೋಕಿಗೇನೂ ಕಮ್ಮಿಯಿಲ್ಲ ಎಂದು ಎಲ್ಲರೂ ಕಿಚಾಯಿಸಿದವರೆ. 'ಅಲ್ಲಿ ಹಿಮಾಲಯದ ತಪ್ಪಲಲ್ಲಿ ನಿಂತು ಫೋಸು ಕೊಟ್ಟು ಫೋಟೋ ತೆಗೀಂತ ಹಲ್ಲುಗಿಂಜ್ತೀರಲ್ಲ! ಆಗ ನಿಮಗೆ ಸರಿಯಾದ ಜವಾಬು ಕೊಡ್ತೀನಿ' ಎಂದು ರೋಪು ಹಾಕಿದ್ದೆ.

ಸುಂದರ ಗಿರಿಧಾಮ ಮಸ್ಸೂರಿ ವಾಸದ ನಂತರ ನಮ್ಮನ್ನು ಸಂಕ್ರಿ ಎಂಬ ಬೇಸ್ ಕ್ಯಾಂಪಿಗೆ ಕರೆದುಕೊಂಡು ಹೋದರು. ಅಲ್ಲಿ ಚಳಿಯ ಪ್ರಮಾಣ ಅಧಿಕವಾಗಿತ್ತು. ನಮ್ಮನ್ನು ಕರೆದುಕೊಂಡು ಹೋದ ಬಸ್ಸು ಅಸಲಿಗೆ ಬಸ್ಸೇ ಅಲ್ಲ. ಅದೊಂದು ಮಿಲಿಟರಿಯ ಹಳೆಯ ಲಾರಿ. ಯಾರೋ ಗುಜರಿಯಲ್ಲಿ ಖರೀದಿಸಿ, ಅದನ್ನು ಬಸ್ಸಾಗಿ ಮತಾಂತರ ಮಾಡಿಸಿದ್ದರು. ದವಸ ಧಾನ್ಯ ಕ್ಲೀನು ಮಾಡುವ ಮೊರದಲ್ಲಿ ಹಾಕಿ ಕೇರಿದಂತೆ ಎತ್ತೆತ್ತಿ ಬಿಸಾಡುತ್ತಿದ್ದ ಬಸ್ಸು ನರಕವನ್ನೇ ತೋರಿಸಿ ಬಿಟ್ಟಿತು. ಇಡೀ ಪ್ರಯಾಣ ಯಮಯಾತನೆಯಾಗಿತ್ತು. ಇದರ ನಡುವೆಯೂ ನಾ ಕ್ಯಾಮೆರಾ ಹಿಡಿದು ಆಳವಾದ ಕಣಿವೆಗಳ ಪಟಗಳನ್ನು ತೆಗೆಯುತ್ತಿದ್ದೆ. ಮಾಮೂಲಿ ಕ್ಯಾಮೆರಾದಲ್ಲಿ ಹೆಚ್ಚು ರಿಸ್ಕ್ ಇಲ್ಲದೆ ಸಲೀಸಾಗಿ ಚಿತ್ರಗಳ ತೆಗೆಯಬಹುದಿತ್ತು. ಇಲ್ಲಿ ಹರಿವ ಯಮುನಾ ಹಾವಿನಂತೆ ಪರ್ವತಗಳ ಬುಡದಲ್ಲಿ ಸುತ್ತುತ್ತಾ ಧೀರೆಯಾಗಿ ನಡೆಯುತ್ತಿದ್ದಳು. ಈ ನದಿ ಚಲಿಸುವ ಸೊಬಗು ಖುದ್ದು ನೋಡಿಯೇ ತಣಿಯಬೇಕು.

ಮಾರನೆಯ ದಿನ ಹಿಮಾಲಯ ಚಾರಣ